# ಸಂಪಾದಕೀಯ

## ಮಾನವನ ನೈತಿಕ ಹಾಗೂ ಸಾಂಸ್ಕೃತಿಕ ಬೆಳವಣಿಗೆ – ಭಾಗ ೧

**ಮ**ನುಷ್ಯನ ಶಾರೀರಕ ಮತ್ತು ಮಾನಸಿಕ ವಿಚಾರಗಳನ್ನು ಕುರಿತ ವಿಶೇಷ ಅಧ್ಯಯನ ಸಾಂಸ್ಕೃತಿಕ ಮಾನವಶಾಸ್ತ್ರ ಅಥವಾ ಕಲ್ಚರಲ್ ಆ್ಯಂತ್ರೋ ಪಾಲಜಿ. ಸಂಸ್ಕೃತಿ, ನೈತಿಕತೆ, ಸಮಾಜದ ರಚನೆ ಹಾಗೂ ಮನುಷ್ಯನಲ್ಲಿ ಮಾತ್ರ ವ್ಯಕ್ತವಾಗುವ ಉದಾತ್ತ ಅಥವಾ ದೈವೀ ಗುಣಗಳನ್ನು ಕುರಿತು ಈ ಶಾಸ್ತ್ರವು ಸಂಶೋಧನೆಗಳ ಮೂಲಕ ತಿಳಿಯಲು ಪ್ರಯತ್ನಿಸುತ್ತದೆ. ಈ ಪ್ರಯತ್ನದಲ್ಲಿ ಮಾನವನ ವಿಕಾಸವನ್ನು ದಾಖಲಿಸುವ ಇತಿಹಾಸ, ಪುರಾತತ್ವಶಾಸ್ತ್ರ, ಸಾಹಿತ್ಯ, ಜಾನಪದ ಕಲೆಗಳಿಂದಲೂ ಮಾಹಿತಿಯನ್ನು ಪಡೆದುಕೊಳ್ಳುವುದು ಸಹಜವೇ. ಪ್ರಾಣಿಗಳ ಮಟ್ಟದಲ್ಲಿದ್ದ ಮಾನವನನ್ನು ಬದಲಾಯಿಸಿದ ಶಕ್ತಿಗಳು ಯಾವುವು? ಈ ಬದಲಾವಣೆಯು ಎಲ್ಲಿಯವರೆಗೆ ಮುಂದುವರಿಯುತ್ತದೆ ಎಂಬೀ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಳ್ಳುವುದೇ ಮಾನವಶಾಸ್ತ್ರದ ಉದ್ದೇಶ. ಈ ಶಾಸ್ತ್ರವು ಇಪ್ಪತ್ತನೆಯ ಶತಮಾನದಲ್ಲಿ ಪ್ರಾಧಾನ್ಯವನ್ನು ಪಡೆದುಕೊಂಡಿತು. ಸ್ವಾಮಿ ವಿವೇಕಾನಂದರು ಮೂಲತಃ ಮಾನವನನ್ನು ಕುರಿತು ಬಹಳ ಆಳವಾಗಿ ಆಲೋಚನೆಯನ್ನು ಮಾಡಿದವರು. ಅದರ ಜೊತೆಗೆ ಸಮಾಜದ ಉತ್ತಮಿಕೆಯ ಬಗ್ಗೆಯೂ ಅವರಲ್ಲಿ ಕಾಳಜಿ ಇತ್ತು. ಮಾನವ ಮತ್ತು ಸಮಾಜ—ಈ ಎರಡೂ ಅಂಶಗಳನ್ನು ಸಮರ್ಪಕವಾಗಿ ಬಲಗೊಳಿಸಬೇಕಾದರೆ ಅದು ಆಧ್ಯಾತ್ಮಿಕ ತಳಹದಿಯ ಮೇಲೆ ನಿಂತಿರುವ ನೈತಿಕ ಹಾಗೂ ಸಾಂಸ್ಕೃತಿಕ ಬೆಳವಣಿಗೆಯಿಂದ ಮಾತ್ರ ಸಾಧ್ಯ ಎಂಬುದನ್ನು ಅವರು ಸ್ಪಷ್ಟವಾಗಿ ಪ್ರತಿಪಾದಿಸುತ್ತಾರೆ. ಅವರ ವಿಚಾರಗಳನ್ನು ಹೇಗೆ ಆಧುನಿಕ ಸಮಾಜ ವಿಜ್ಞಾನಿಗಳು ಸಮರ್ಥಿಸುತ್ತಿದ್ದಾರೆ ಎಂಬುದನ್ನು ಪರಿಶೀಲಿಸೋಣ.

> **ನೀತಿಯ ಪ್ರಮಾಣ—ಎಂದರೆ ಇದು ನೀತಿ, ಇದಲ್ಲ; ಇದು ಸದಾಚಾರ, ಇದು ದುರಾಚಾರ ಎಂಬುದನ್ನು ತಿಳಿಸತಕ್ಕಂತಹ, ಎಂದರೆ ನೀತಿಯನ್ನು ಅಳೆಯುವ ಅಳತೆಯ ಕೋಲು—ಭಿನ್ನಭಿನ್ನವಾಗಿರುತ್ತದೆ. ಆದರೂ ಸಾರ್ವತ್ರಿಕ ಎಂದರೆ ಸರ್ವತ್ರ ಪ್ರಯೋಗ ಮಾಡಬಹುದಾದ ಒಂದು ನೈತಿಕ ಪ್ರಮಾಣವಿರಲೇಬೇಕೆಂಬ ಭಾವನೆ ನಮಗೆಲ್ಲರಿಗೂ ಉಂಟು.**
>
> —ಸ್ವಾಮಿ ವಿವೇಕಾನಂದ

ಮನುಷ್ಯನ ಜೀವನವನ್ನು ಗಮನಿಸಿದಾಗ ಶರೀರಕ್ಕೂ ಮನಸ್ಸಿಗೂ ನಿಕಟವಾದ ಸಂಬಂಧವಿರುವುದು ತಿಳಿದು ಬರುತ್ತದೆ. ಶಾರೀರಿಕ ಕ್ರಿಯೆಗಳೊಂದಿಗೆ ಮನಸ್ಸೂ ಸೇರಿದಾಗ ಆ ಕ್ರಿಯೆಗಳು ನೀರಸವಾಗದೆ ವ್ಯಕ್ತಿಯ ಮಾನಸಿಕ ಬೆಳವಣಿಗೆಗೆ ಮಾರ್ಗವಾಗುತ್ತವೆ. ದುಡಿಮೆಯು ಎಲ್ಲ ಜೀವಿಗಳಲ್ಲೂ ಕಂಡುಬರುವ ಸಾಮಾನ್ಯ ಗುಣವಾದರೂ ಉತ್ತಮಿಕೆ, ಕಲೆ, ಸೃಜನಶೀಲತೆ—ಇವು ಬೆಳೆಯುವುದು ಸಂಸ್ಕೃತಿಯ ಪ್ರಭಾವದಿಂದ. ಪರಂಪರಾಗತವಾಗಿ ಬಂದಿರುವ ನಂಬಿಕೆಗಳಿಗೆ ಸರಿಹೊಂದುವ ನಡವಳಿಕೆ ಅಥವಾ ಆಯಾ ಪ್ರದೇಶದಲ್ಲಿನ ಸಮಾಜದಲ್ಲಿನ ಜನರು ಒಪ್ಪುವಂತಹ ನಡವಳಿಕೆ- ಇದೇ ನೈತಿಕತೆ ಎಂದು ನಿಘಂಟು ಅರ್ಥೈಸುತ್ತದೆ. ಮಾನವನು ನೈತಿಕವಾಗಿದ್ದಾಗ, ತನ್ನ ನಡತೆಯನ್ನು ಸಮಾಜದ ನೀತಿ ನಿಯಮಗಳಿಗೆ ಸರಿಹೊಂದಿಸಿ ನಡೆದುಕೊಂಡಾಗ ಅವನನ್ನು ಸುಸಂಸ್ಕೃತ, ಒಳ್ಳೆಯ ವ್ಯಕ್ತಿ ಎಂದು ಗುರುತಿಸುತ್ತೇವೆ. ಕಾಲಾನುಕ್ರಮದಲ್ಲಿ ರೂಢಿಸಿಕೊಂಡಿರುವ ಕೆಲವು ಆಚರಣೆಗಳು ಸುಧಾರಣೆ ಹೊಂದಿದಾಗ, ಮಾನವನ ನಡೆನುಡಿಗಳಲ್ಲಿ, ಒಳಮನಸ್ಸಿನಲ್ಲಿ ಬದಲಾವಣೆಯಾದಾಗ, ವ್ಯಕ್ತಿ ಸುಸಂಸ್ಕೃತನಾಗಿದ್ದಾನೆ ಎಂದು ಹೇಳುತ್ತೇವೆ. ಜೈವಿಕ ಪ್ರಚೋದನೆಗಳ ವಿರುದ್ಧವಾಗಿ ಶಿಕ್ಷಣದಿಂದ, ಸಮಾಜದ ವಿವಿಧ ಪ್ರಭಾವಗಳಿಂದ ಹಾಗೂ ಅಂತಃಸ್ಫುರಣೆಯಿಂದ ಸಾಧಿಸಬಹುದಾದ ಗುಣಗಳನ್ನು ಸಂಸ್ಕೃತಿಯೆಂದು ಕರೆಯುತ್ತೇವೆ. ಸುಸಂಸ್ಕಾರಗಳ ಒಟ್ಟು ಮೊತ್ತವೇ ಮಾನವನ ಒಳಮನಸ್ಸು, ಅಂತಸ್ಸಾಕ್ಷಿ. ನಮ್ಮ ಅನೇಕ ಆಚರಣೆಗಳನ್ನು ನಿರ್ಧರಿಸುವುದು ಈ ಅಂತಸ್ಸಾಕ್ಷಿ. ಒಳ್ಳೆಯದು–ಕೆಟ್ಟದ್ದು, ನೈತಿಕ–ಅನೈತಿಕ ಈ ಎಲ್ಲ ನಿರ್ಧಾರಗಳಲ್ಲಿ ಅಂತಸ್ಸಾಕ್ಷಿ ಪ್ರಧಾನ ಪಾತ್ರ ವಹಿಸುತ್ತದೆ.

### ನೈತಿಕತೆಯನ್ನು ನಿರ್ಧರಿಸುವ [illegible]

ಮನುಷ್ಯನ ವ್ಯಕ್ತಿತ್ವದಲ್ಲಿ ಆಗುವ ಬೆಳವಣಿಗೆಯಂತೆ ಅವನ ನೈತಿಕತೆಯಲ್ಲೂ ಬೆಳವಣಿಗೆಯಾಗುತ್ತದೆ. ಸರಿಯಾದ ನೈತಿಕತೆ ಇದ್ದಲ್ಲಿ ವ್ಯಕ್ತಿಯು ತನ್ನ ವ್ಯಕ್ತಿತ್ವದಲ್ಲಿ ಭಾವಗಳ ದೃಢತೆ ಹಾಗೂ ಪರಿಪೂರ್ಣತೆಯನ್ನು ಹೊಂದಿರುತ್ತಾನೆ. ದ್ವಂದ್ವಗಳ ಹೋರಾಟದಿಂದ ಉಂಟಾಗುವ ಮಾನಸಿಕ ವೇದನೆ ಹಾಗೂ ಅಪರಾಧ ಪ್ರಜ್ಞೆಯಿಂದ ಮುಕ್ತನಾಗಿರುತ್ತಾನೆ. ಇದರಿಂದಾಗಿ ಸಮಾಜದೊಂದಿಗೆ ಹೆಚ್ಚು ಹೊಂದಾಣಿಕೆಯನ್ನೂ ಪಡೆದುಕೊಳ್ಳುತ್ತಾನೆ. ಇಂತಹ ವ್ಯಕ್ತಿಯ ಕೆಲಸದ ಕ್ಷೇತ್ರದಲ್ಲಿ ಅಥವಾ ಸಂಸಾರದಲ್ಲಿ ಸಂಬಂಧಗಳು ಅರ್ಥಪೂರ್ಣವಾಗಿದ್ದು, ಘರ್ಷಣೆಗಳಿಗೆ

ಅವಕಾಶವಿರುವುದಿಲ್ಲ. ತನ್ನ ಬಗ್ಗೆ ಇವನಿಗಿರುವ ಆತ್ಮವಿಶ್ವಾಸ ಹಾಗೂ ಇತರರಿಗೆ ಇವನ ಬಗ್ಗೆ ಇರುವ ನಂಬಿಕೆ, ಗೌರವಗಳು ಇವಕ್ಕೆ ಪೂರಕವಾಗಿರುತ್ತವೆ. ಜೀವನದ ಮೌಲ್ಯಗಳಲ್ಲೂ ಗಮನಾರ್ಹ ಬದಲಾವಣೆಗಳನ್ನು ನೈತಿಕತೆ ಸಾಧಿಸುತ್ತದೆ. ನೈತಿಕತೆಯಿಂದ ವ್ಯಕ್ತಿಯ ಸಾಮಾಜಿಕ ಪ್ರಜ್ಞೆ ಮತ್ತು ದೃಷ್ಟಿ ಬದಲಾಗಿ ಅವನ ಕ್ರಿಯೆಗಳಲ್ಲಿ ಗಾಂಭೀರ್ಯ ಹಾಗೂ ಜವಾಬ್ದಾರಿ ಕಂಡುಬರುತ್ತವೆ. ಆದ್ದರಿಂದ ವ್ಯಕ್ತಿಯ ನೈತಿಕ ಬೆಳವಣಿಗೆಯನ್ನು, ಈ ಎಲ್ಲ ಪರಿಣಾಮಗಳ ಹಿನ್ನೆಲೆಯಲ್ಲಿ ಗುರುತಿಸಿದಾಗ ಮಾತ್ರ ಅದು ಸಮಗ್ರವಾದ ಅಥವಾ ದೃಢವಾದ ನೈತಿಕತೆಯೇ ಅಲ್ಲವೇ ಎಂಬುದನ್ನು ನಿರ್ಧರಿಸಬಹುದು.

> ನಾವು ಮುಖ್ಯವಾಗಿ ತಿಳಿದುಕೊಳ್ಳಬೇಕಾಗಿರುವ ವಿಷಯ ಯಾವುದೆಂದರೆ, ಕರ್ತವ್ಯ, ನೀತಿಗಳಲ್ಲಿ ಬೇರೆ ಬೇರೆ ಸ್ತರಗಳುಂಟು ಎಂಬುದು. ಅಂದರೆ ಈ ಜೀವನ ಯಾತ್ರೆಯಲ್ಲಿ ಒಂದು ಪರಿಸ್ಥಿತಿ ಅಥವಾ ಶ್ರೇಣಿಯಲ್ಲಿರತಕ್ಕವನ ಕರ್ತವ್ಯವು ಯಾವುದೋ ಅದು ಬೇರೆ ಪರಿಸ್ಥಿತಿ ಅಥವಾ ಶ್ರೇಣಿಯಲ್ಲಿರತಕ್ಕವನ ಕರ್ತವ್ಯವಾಗದು. ಆಗಲೂಬಾರದು ಎಂಬುದು.
>
> —ಸ್ವಾಮಿ ವಿವೇಕಾನಂದ

## ವ್ಯಕ್ತಿ ಹಾಗೂ ಸಮಾಜದ ನೈತಿಕತೆ

ಸಮಾಜದ ವಾಸ್ತವಿಕ ಬದುಕಿನಲ್ಲಿ ಭಾಷೆ, ಸಾಹಿತ್ಯ, ಇತಿಹಾಸ, ಕಲೆ, ಧಾರ್ಮಿಕ ನಂಬಿಕೆಗಳು—ಇವೆಲ್ಲ ಸಾಮೂಹಿಕ ನೈತಿಕತೆಯನ್ನು ಪ್ರತಿಬಿಂಬಿಸುತ್ತವೆ. ಸಾಮಾಜಿಕ ಪ್ರಜ್ಞೆಯನ್ನು ಮನುಷ್ಯ ಬೆಳೆಸಿಕೊಂಡಾಗ ಅವನ ವರ್ತನೆಯಲ್ಲಿ ಬದಲಾವಣೆಗಳನ್ನು ಕಾಣುತ್ತೇವೆ. ಈ ಬದಲಾವಣೆಗಳಿಗೆ ಸಮಷ್ಟಿಯ ನೈತಿಕತೆಯೇ ಕಾರಣ. ಮಗುವು ಸಣ್ಣ ಪ್ರಾಯದಲ್ಲಿ ಸ್ವಕೇಂದ್ರಿತ ಬದುಕನ್ನೇ ನಡೆಸುತ್ತದೆ. ಎಲ್ಲವೂ ತನ್ನದು, ಎಲ್ಲವೂ ತನಗೇ ಇರಬೇಕು ಎಂದು ಭಾವಿಸುತ್ತದೆ. ಸದಾಕಾಲ ಅದಕ್ಕೆ ಸಿಗುವ ಆರೈಕೆ, ಮಮತೆ ಹಾಗೂ ಪ್ರಾಶಸ್ತ್ಯ ಆ ಭಾವನೆಯನ್ನು ಹೆಚ್ಚಿಸುತ್ತಲೂ ಇರುತ್ತದೆ. ಆದರೆ ಅದು ಬೆಳೆದಂತೆ ತಾಯಿತಂದೆಯರು, ಅಣ್ಣಅಕ್ಕಂದಿರು ಅದನ್ನು ತಿದ್ದಲು, ಅದಕ್ಕೆ ಶಿಸ್ತನ್ನು ಕಲಿಸಲು ಪ್ರಾರಂಭಿಸುತ್ತಾರೆ. ಭಾಷೆಯನ್ನು ಸರಿಯಾಗಿ ಕಲಿಯಲು, ಸರಿಯಾದ ಪದಗಳನ್ನೇ ಬಳಸಲು, ವಸ್ತುಗಳನ್ನು ಹಾಳುಮಾಡದಿರಲು ಮಗುವು ಕಲಿಯುತ್ತದೆ. ಒಂದು ದೊಡ್ಡ ಸಮೂಹದಲ್ಲಿ ತಾನೊಂದು ಅಂಗವೆಂಬ ಕಲ್ಪನೆ ಅದರಲ್ಲಿ ಮೂಡುತ್ತಿದ್ದಂತೆ ನೈತಿಕತೆಯ ಪ್ರಜ್ಞೆ ಬೆಳೆಯಲಾರಂಭಿಸುತ್ತದೆ. ತಪ್ಪು ಮಾಡಿದಾಗ, ಅದಕ್ಕೆ ಶಿಕ್ಷೆ ವಿಧಿಸಿದಾಗ, ಮನೆಯ ಹಂತದಲ್ಲಿಯೇ ಅದು ನಾಚಿಕೆ, ಮರ್ಯಾದೆಯಂತಹ ವಿಚಾರಗಳನ್ನು ತಿಳಿಯುತ್ತದೆ. ಶಾಲೆಗೆ ಹೋಗಲು ಪ್ರಾರಂಭಿಸಿದಾಗ ಸಾಮಾಜಿಕ ಮೌಲ್ಯಗಳನ್ನು ತಿಳಿಯಲು ಪ್ರಾರಂಭಿಸುತ್ತದೆ. ಕಳ್ಳರಿಗೆ ಆಗುವ ಶಿಕ್ಷೆ, ಅವಮಾನಗಳನ್ನು ಕಂಡು ಭಯಭೀತಿಗಳನ್ನು ರೂಢಿಸಿಕೊಳ್ಳುತ್ತದೆ. ಸಮಾಜದ ವಿರುದ್ಧ, ವ್ಯವಸ್ಥೆಯ ವಿರುದ್ಧ ನಡೆಯುವುದು, ಅದಕ್ಕೆ ಭಂಗ ತರುವುದು ಅನುಚಿತವೆಂಬ ಪ್ರಜ್ಞೆ ಅದರಲ್ಲಿ ಮೂಡಲು ಆರಂಭಿಸುತ್ತದೆ. ಥಾಮಸ್.ಬಿ. ಮೆಕಾಲೇ ಹೇಳುತ್ತಾನೆ: "ತಾನು ಎಂದಿಗೂ ಸಿಕ್ಕಿಹಾಕಿಕೊಳ್ಳುವುದಿಲ್ಲ ಎಂದು ಗೊತ್ತಿರುವವನು ಏನು ಮಾಡುವನೋ, ಅದು ಆ ಮನುಷ್ಯನ ನಿಜವಾದ ನೈತಿಕ ಗುಣಮಟ್ಟವನ್ನು ಪರಿಚಯಿಸುತ್ತದೆ." ನಿಂದೆ, ತಿರಸ್ಕಾರಗಳ ಭಯವೇ ನೈತಿಕಪ್ರಜ್ಞೆಗೆ ಕಾರಣ ಎಂದು ಮನಃಶಾಸ್ತ್ರಜ್ಞರ ಅಭಿಪ್ರಾಯ. ಆದರೆ ಇದು ಅಸಮರ್ಪಕವೆಂಬುದನ್ನು ಮುಂದೆ ನೋಡುತ್ತೇವೆ.

ಒಬ್ಬ ವ್ಯಕ್ತಿಯನ್ನು ಅರಿಯಬೇಕಾದರೆ ಅವನ ಮನಸ್ಸಿನಲ್ಲಿರುವ ಭಾವನೆಗಳನ್ನು, ನಡವಳಿಕೆಯ ಹಿಂದಿರುವ ವ್ಯಕ್ತಿಗತವಾದ ತುಡಿತಗಳನ್ನು ವಿಶ್ಲೇಷಿಸಿದರೆ ಮಾತ್ರ ಸಮಗ್ರವಾದ ಚಿತ್ರ ಮೂಡಲು ಸಾಧ್ಯ. ವ್ಯಕ್ತಿಯ ನಡವಳಿಕೆಯ ಮೇಲೆ ಅಕ್ಕಪಕ್ಕದವರ ಪ್ರಭಾವ ಕಂಡುಬರುವಂತೆ ಒಂದು ಸಮಾಜ ಅಥವಾ ಜನಾಂಗವೂ ಕೂಡ ಇತರ ಸಮಾಜಗಳಿಂದ, ಜನಾಂಗಗಳಿಂದ ಪ್ರಭಾವಿತವಾಗುತ್ತದೆ. ಇತರ ಸಂಸ್ಕೃತಿಗಳಿಂದ ಎಷ್ಟೋ ವಿಚಾರಗಳನ್ನು ಪಡೆದುಕೊಂಡು ತನ್ನ ಮೂಲ ಸಂಸ್ಕೃತಿಯನ್ನು ಅಭಿವೃದ್ಧಿಗೊಳಿಸುವ ಸಾಧ್ಯತೆ ಸಮಾಜಕ್ಕೂ ಇದೆ. ವ್ಯಕ್ತಿಯಂತೆ ಸಮಾಜವೂ ನೈತಿಕವಾಗಿ ಬೆಳೆಯುತ್ತದೆ ಅಥವಾ ಕುಸಿಯುತ್ತದೆ. ವ್ಯಕ್ತಿ ಹಾಗೂ ಸಮಾಜದ ವಿಕಾಸ—ಅನೇಕ ವೇಳೆ ಇವು ಹಾಸುಹೊಕ್ಕಾಗಿ ವ್ಯಕ್ತಿಯ ನಡವಳಿಕೆಯನ್ನು ರೂಪಿಸುತ್ತಿರುತ್ತವೆ.

ವ್ಯಕ್ತಿಯು ಜೀವಿಸಬೇಕೆಂದು ಬಯಸುವುದರಿಂದಲೇ ನೈತಿಕತೆಯನ್ನೂ ರೂಢಿಸಿಕೊಳ್ಳುತ್ತಾನೆ. ತಾನು ಜೀವಿಸಬೇಕು, ತಿಳಿಯಬೇಕು, ಇತರರೊಂದಿಗೆ ವ್ಯವಹರಿಸಬೇಕೆಂಬ ಹಂಬಲ ಪ್ರತಿಯೊಬ್ಬ ವ್ಯಕ್ತಿಗೂ ಇರುತ್ತದೆ. (*ಹೆಚ್ಚಿನ ವಿವರಗಳಿಗೆ ವಿವೇಕಪ್ರಭ, ೨೦೦೫, ಆಗಸ್ಟ್ ಸಂಪಾದಕೀಯ ನೋಡಿ*). ವ್ಯಕ್ತಿಯಂತೆಯೇ ಪ್ರತಿಯೊಂದು ಸಮಾಜಕ್ಕೂ ಜೀವಿಸಬೇಕೆಂಬ ಹಂಬಲ, ಹೋರಾಟ ನಡೆಯುತ್ತಿದೆಯಾದರೂ ಆಯಾ ಸಮಾಜದಲ್ಲಿನ ವ್ಯಕ್ತಿಗಳ ನಡುವಣ ಬಾಂಧವ್ಯದ ಸೆಳೆತವು ಶಕ್ತಿಯುತವಾಗಿದ್ದರೆ ಮಾತ್ರ ಆ ಸಮಾಜವು ಇತರ

ಸಮಾಜಗಳ, ಪ್ರತಿಕೂಲ ಪರಿಸ್ಥಿತಿಗಳ ಒತ್ತಡಗಳನ್ನು ಮೀರಿ ಮುಂದುವರೆಯಬಲ್ಲದು. ಸಮಾಜವು ಕೇವಲ ತನ್ನಲ್ಲಿನ ವ್ಯಕ್ತಿಗಳ ಆತ್ಮರಕ್ಷಣೆ ಅಥವಾ ಆತ್ಮಾಭಿವ್ಯಕ್ತಿಗಳಿಗೆ ಪ್ರಾಶಸ್ತ್ಯ ನೀಡುವ ವ್ಯವಸ್ಥೆಯಾಗದೆ ಪರಸ್ಪರ ಸಂಬಂಧಗಳ ಬೆಸುಗೆಗೆ ಬೇಕಾದ ಪ್ರೀತಿ, ಸಹಕಾರ, ನಿಃಸ್ವಾರ್ಥತೆಗಳಂತಹ ಮೌಲ್ಯಗಳ ಪೋಷಕ ಸಂಸ್ಥೆಯಾಗಬೇಕು. ಆಗ ಮಾತ್ರ ವ್ಯಕ್ತಿ ಹಾಗೂ ಸಮಾಜ—ಎರಡೂ ಹಿತಕರವಾದ ನೈತಿಕತೆ ಮತ್ತು ಸಂಸ್ಕೃತಿಯ ಮಟ್ಟವನ್ನು ಪಡೆಯುವುದು ಸಾಧ್ಯವಾಗುತ್ತದೆ.

ವ್ಯಕ್ತಿ ತಾನು ಒಳ್ಳೆ ಎಂಬ ಕೆಲಸವನ್ನು ಯಾವ ಕಾನೂನೂ ಅವನಿಂದ ಮಾಡಿಸಲಾಗುವುದಿಲ್ಲ. ಆಂತರಿಕ ಪ್ರೇರಣೆಯಿಂದ ತಾನು ಒಳ್ಳೆಯವನಾಗಬೇಕು ಎಂದು ಬಲವಾಗಿ ಇಚ್ಛಿಸಿದಾಗ ಮಾತ್ರ ಆತ ಒಳ್ಳೆಯವನಾಗುತ್ತಾನೆ.

—ಸ್ವಾಮಿ ವಿವೇಕಾನಂದ

## ಸಹಜ ಸ್ವಭಾವಕ್ಕೆ ವಿರುದ್ಧವಾದ ಹೋರಾಟ ನೈತಿಕತೆ

ಇತಿಹಾಸದುದ್ದಕ್ಕೂ ಮಾನವನು ಸ್ವಾತಂತ್ರ್ಯವನ್ನೇ ಬಯಸುತ್ತ ಬಂದಿದ್ದಾನೆ. ಪ್ರಾಣಿಯ ಹಂತದಲ್ಲಿದ್ದಾಗ ವ್ಯಕ್ತವಾಗುತ್ತಿದ್ದ ಕ್ರೌರ್ಯ, ಸ್ವಾರ್ಥ, ಭಯಗಳಂತಹ ಹುಟ್ಟುಗುಣಗಳ ಜಾಗದಲ್ಲಿ ಪ್ರೇರಣೆಯನ್ನು ಅವಲಂಬಿಸಿದ ಇತರ ಭಾವನೆಗಳನ್ನು ಬೆಳೆಸಿಕೊಂಡಿದ್ದಾನೆ. ಹುಟ್ಟುಗುಣಗಳಲ್ಲಿ ಆವೇಶ ಜಾಸ್ತಿಯಿದ್ದರೆ ಪ್ರೇರಕಶಕ್ತಿಗಳಲ್ಲಿ ತಿಳಿವಳಿಕೆ, ತನ್ನತನಗಳಂತಹ ಬುದ್ಧಿ ಹಾಗೂ ಸಂಕಲ್ಪಶಕ್ತಿಯಿಂದ ಪ್ರಭಾವಿತವಾದ ಅಂಶಗಳಿರುತ್ತವೆ. ಉದಾಹರಣೆಗೆ, ಇದ್ದಕ್ಕಿದ್ದಂತೆ ಒಬ್ಬ ವ್ಯಕ್ತಿ ಗಾಬರಿಗೊಂಡಾಗ ಭಯ ಹಾಗೂ ಆತ್ಮರಕ್ಷಣೆಯ ಭಾವನೆಗಳು ಅವನಲ್ಲಿ ಕೂಡಲೇ ಜಾಗೃತವಾಗುತ್ತವೆ. ಅವನ ಮಿದುಳಿನ ಗ್ರಂಥಿಗಳು ಕಷ್ಟಪರಿಸ್ಥಿತಿ ಹಾಗೂ ಅದರಿಂದ ಸಂಭವಿಸಬಹುದಾದಂತಹ ನೋವನ್ನು ಸಹಿಸುವುದಕ್ಕಾಗಿ ಅಡ್ರೆನಲಿನ್ ದ್ರವವನ್ನು ಹೆಚ್ಚು ಪ್ರಮಾಣದಲ್ಲಿ ತಯಾರಿಸಿ, ರಕ್ತನಾಳಗಳಲ್ಲಿ ಹೊರಹಾಕುತ್ತವೆ. ಅದರಿಂದ ವ್ಯಕ್ತಿಯು ಭಯವನ್ನು ಎದುರಿಸುವ ಸಾಮರ್ಥ್ಯವನ್ನು ಪಡೆದುಕೊಳ್ಳುತ್ತಾನೆ. ಇದು ಪ್ರಾಣಿಗಳಲ್ಲಿಯೂ ಕಂಡುಬರುವ ಪ್ರತಿಕ್ರಿಯೆ. ಆದರೆ ಭಯಗೊಂಡ ಮಾನವ ಕೆಲವೇ ಕ್ಷಣಗಳಲ್ಲಿ ಆಶ್ಚರ್ಯಪಡಬಹುದು, ಕೋಪಗೊಳ್ಳಬಹುದು ಅಥವಾ ಆ ಸ್ಥಳದಿಂದ ಪಲಾಯನವನ್ನೂ ಮಾಡಬಹುದು. ಈಗ ಅವನ ಬುದ್ಧಿ ಹಾಗೂ ಸಂಕಲ್ಪ ಶಕ್ತಿಗಳು ಕೆಲಸಮಾಡಲು ಪ್ರಾರಂಭಿಸುತ್ತವೆ. ಇದು ಕೇವಲ ದೈಹಿಕ ಪ್ರತಿಕ್ರಿಯೆಯನ್ನು ಮೀರಿದ ಬೌದ್ಧಿಕ ಪ್ರತಿಕ್ರಿಯೆ. ಅಂದರೆ ತನ್ನ ಶರೀರದ ಹಾಗೂ ಮನಸ್ಸಿನ ಕ್ರಿಯೆಗಳ ಮೇಲೆ ಮನುಷ್ಯ ಹಿಡಿತ, ಸಂಯಮಗಳನ್ನು ಸಾಧಿಸಲು ಪ್ರಯತ್ನಿಸುತ್ತಾನೆ. ಇದು ತಾನು ಮುಕ್ತನಾಗಬೇಕು ಎಂಬ ಹಂಬಲದಿಂದ ಹೊರಹೊಮ್ಮುತ್ತದೆ.

ಗುಂಪಿನ ಮಧ್ಯದಲ್ಲಿರುವ ಮಾನವನ ನಡತೆಯು ಮತ್ತಷ್ಟು ಸಂಯಮವನ್ನು ಒಳಗೊಂಡಿರುತ್ತದೆ. ಸಂತಾನೋತ್ಪತ್ತಿ, ಪಾಲನೆ ಹಾಗೂ ಸಮುದಾಯ ಪ್ರವೃತ್ತಿಗಳು ಪ್ರಕೃತಿಯಿಂದ ಬಂದಿರುವ ಬಲವಾದ ಪ್ರಚೋದನೆಗಳು, ಜಾಯಮಾನಗಳು. ಸಂತತಿಯನ್ನು ಉಳಿಸಿಕೊಳ್ಳಬೇಕು ಎಂಬ ಈ ಪ್ರಬಲ ಇಚ್ಛೆಗೆ ಅನುಗುಣವಾಗಿ ಮಾನವ ನಡೆದುಕೊಂಡಿದ್ದರೆ ವಿವಾಹ ಪದ್ಧತಿಯು ಇರುತ್ತಿರಲಿಲ್ಲ. ಪ್ರಾಣಿಗಳಂತೆ ಕೇವಲ ಮಕ್ಕಳನ್ನು ಪಡೆಯುವುದರಲ್ಲೇ ತೃಪ್ತನಾಗಿರಬೇಕಿತ್ತು. ಆದರೆ ನೀತಿ, ನಿಯಮಗಳನ್ನು ತನ್ನ ರಕ್ಷಣೆಗೆಂದೇ ಕಲ್ಪಿಸಿಕೊಂಡ ಮಾನವ ಅವುಗಳಿಂದ ಎಷ್ಟು ಪ್ರಭಾವಿತನಾಗಿದ್ದಾನೆಂದರೆ ಅದಕ್ಕಿಂತ ಭಿನ್ನವಾದ ನಡವಳಿಕೆಯನ್ನು ಕಂಡಾಗ ತಿರಸ್ಕಾರ ವ್ಯಕ್ತಪಡಿಸುತ್ತಾನೆ. ಅನೇಕ ವೇಳೆ ಇದು ಹಿರಿಯರ ಅನುಕರಣೆಯಿಂದಲೂ ಪ್ರೇರಿತವಾಗಿದ್ದು ಅನುಕರಣೆಯ ಮೂಲಕ ಗುಂಪಿನಲ್ಲಿ ಒಂದಾಗುವ ಹಂಬಲ, ಬಯಕೆ ಇರುತ್ತದೆ. ಅನಂತರ ಕರುಣೆ, ಅನುಕಂಪ, ಪ್ರೇಮ ಇತ್ಯಾದಿ ಗುಣಗಳು ಕೆಲಸ ಪ್ರಾರಂಭಿಸುತ್ತವೆ. ವಿವೇಚನೆಯಿಂದ ಒಂದು ಘಟನೆಯನ್ನು ಪರಿಶೀಲಿಸಿ ಸ್ವೀಕರಿಸುವ ಮನೋಭಾವ ಬೆಳೆದಾಗ, ಇದು ಮುಂದಿನ ಪೀಳಿಗೆಗಳಿಗೆ ಮಾದರಿಯಾಗಿ, ಸಮಾಜದ ವ್ಯವಸ್ಥೆಯಲ್ಲಿ ಮಾರ್ಪಾಡನ್ನು ತರಲು ಕಾರಣವಾಗುತ್ತದೆ. ಗುಂಪಿನ ಉಳಿವು ಎಲ್ಲರ ಸಹಕಾರ, ವಿಧೇಯತೆಗಳನ್ನು ಅವಲಂಬಿಸಿದೆ ಎಂಬ ತಿಳಿವಿನೊಂದಿಗೆ ಅದರಿಂದ ತನ್ನನ್ನು ಪ್ರತ್ಯೇಕಿಸುವ ಆಸೆ, ಬಯಕೆಗಳನ್ನು ಬಿಟ್ಟು, ನೈತಿಕತೆಗೆ ಶರಣಾಗುತ್ತಾನೆ.

ಗುಂಪಿನ ಹಿತರಕ್ಷಣೆಯೊಂದಿಗೆ ಅದರ ಅವಿಭಾಜ್ಯ ಅಂಗವಾದ ಪ್ರತಿಯೊಬ್ಬ ಮಾನವನ ಅಸ್ತಿತ್ವವೂ ಮುಖ್ಯವೆಂಬುದನ್ನು ಮರೆಯುವಂತಿಲ್ಲ. ಮುಂದೂಡುವ ಪ್ರಕೃತಿದತ್ತ ಒತ್ತಡಗಳನ್ನು ಬಿಟ್ಟ ಸುಸಂಸ್ಕೃತ ಮಾನವ ಅದ್ಭುತವಾಗಿ ಬೆಳೆದಿದ್ದಾನೆ. ಸ್ವಾಭಾವಿಕವಾದ ವರ್ತನೆಯೇ ಇಲ್ಲ ಎನ್ನುವಷ್ಟರ ಮಟ್ಟಿಗೆ ಮನುಷ್ಯ ಬದಲಾಗಿದ್ದಾನೆ. ಆಸೆ, ಆಕಾಂಕ್ಷೆಗಳ ಪ್ರೇರಣೆಯಿಂದ ನಿರಂತರವಾಗಿ ಶೋಧನೆಯನ್ನು ನಡೆಸುತ್ತ ತನ್ನ ಅಸ್ತಿತ್ವವನ್ನು ಕಾಪಾಡಿಕೊಳ್ಳಲು ಬೇಕಾದ ಅಭ್ಯಾಸಗಳನ್ನು ಮಾನವ ಬೆಳೆಸಿಕೊಳ್ಳುತ್ತಾನೆ. ಆದರೆ ಇಲ್ಲಿ ಒಂದು ಪ್ರಶ್ನೆ ಉದ್ಭವಿಸುತ್ತದೆ. ತನ್ನ ಅಸ್ತಿತ್ವಕ್ಕೆ, ಜೀವನಕ್ಕೇ ಮಾರಕವಾದ ಧೂಮಪಾನ, ಮದ್ಯಪಾನಗಳಂತಹ ವ್ಯಸನಗಳಲ್ಲಿ ಮನುಷ್ಯ ಏಕೆ ತೊಡಗುತ್ತಾನೆ? ಮೊದಲನೆಯದಾಗಿ ತಿಳಿವಳಿಕೆಯ ಅಭಾವ—ಅವು

ತನ್ನ ಜೀವನಕ್ಕೆ ಮಾರಕ ಎಂಬ ಅರಿವು ಇಲ್ಲದಿರುವುದು ಇವಕ್ಕೆ ಕಾರಣವಾಗಿರಬಹುದು. ಎರಡನೆಯದು ಹಾಗೂ ಮುಖ್ಯವಾದ ಕಾರಣವೆಂದರೆ ತನ್ನ ಬಗ್ಗೆ, ತನ್ನ ಸಾಮಾಜಿಕ, ನೈತಿಕ, ಸಾಂಸ್ಕೃತಿಕ ಗುಣಮಟ್ಟದ ಬಗ್ಗೆ ವಿಶ್ವಾಸವಿಲ್ಲದಿರುವುದು; ತಾನು ವ್ಯಸನಗಳಿಂದ ಮುಕ್ತನಾಗಬಲ್ಲೆ ಎಂಬ ವಿಶ್ವಾಸ ವಿಲ್ಲದಿರುವುದು ಅಥವಾ ಕೀಳರಿಮೆ. ಮೂರನೆಯದಾಗಿ ಮಾನವನು ತನ್ನ ಇಂದಿನ ಸ್ಥಿತಿಯೊಂದಿಗೆ ರಾಜಿಮಾಡಿ ಕೊಂಡು, ಬದಲಾಗಲು, ಉತ್ತಮನಾಗಲು ನಿರಾಕರಿಸುವುದು, ತಮೋ ಗುಣವನ್ನು ಅವಲಂಬಿಸುವುದೂ ಕಾರಣವಾಗಿರ ಬಹುದು.

## ನಡತೆಯನ್ನು ರೂಪಿಸುವ ಅಭ್ಯಾಸಗಳು

ಇಲ್ಲಿ ಮತ್ತೊಂದು ಅಂಶವನ್ನು ಗಮನಿಸಬೇಕು. ಅಭ್ಯಾಸಗಳೇ ನಮ್ಮ ನಡವಳಿಕೆಯನ್ನು ನಿರ್ಧರಿಸುತ್ತವೆ. ನೈತಿಕತೆ ಹಾಗೂ ಸಂಸ್ಕೃತಿಯು ಅಭ್ಯಾಸಗಳನ್ನು ಆಧರಿಸಿರು ವುದರಿಂದ ಸರಿಯಾದ ಅಭ್ಯಾಸಗಳನ್ನು ಬೆಳೆಸಿಕೊಳ್ಳುವುದು ಬಹಳ ಮುಖ್ಯ. ಪ್ರಕೃತಿಯಲ್ಲಿರುವ ಬಂಧನಕಾರಕ ಒತ್ತಡ ಗಳನ್ನು ಜಯಿಸಿ ಮಾನವ ತನ್ನ ಅಭ್ಯಾಸ (ಅಥವಾ ದುರಭ್ಯಾಸ)ಗಳಿಗೆ ಬದ್ಧನಾಗುವುದಾದರೆ ಇದರಿಂದ ಸ್ವಾತಂತ್ರ್ಯ ವನ್ನು ಹೇಗೆ ಸಾಧಿಸಿದಂತಾಯಿತು? ಅಭ್ಯಾಸಗಳು ಅನಿವಾರ್ಯವೆಂಬುದು ಮೊದಲ ಅಂಶ. ಕೆಲವರಿಗೆ ಒಳ್ಳೆಯ ಅಭ್ಯಾಸಗಳಿರಬಹುದು ಮತ್ತೆ ಕೆಲವರಿಗೆ ಕೆಟ್ಟ ಅಭ್ಯಾಸ ಗಳಿರಬಹುದು. ಆಯಾ ಸಮಾಜ, ಕಾಲ ಹಾಗೂ ಪರಿಸ್ಥಿತಿ ಯನ್ನು ಇದು ಅವಲಂಬಿಸಿರುತ್ತದೆ. ಸ್ವಾಮಿ ವಿವೇಕಾನಂದರು ಹೇಳುವಂತೆ, **"ನೀತಿಯ ವಿಷಯವಾಗಿ ಬೇರೆ ಬೇರೆ ದೇಶ ಗಳಲ್ಲಿ ಬೇರೆ ಬೇರೆ ಅಭಿಪ್ರಾಯಗಳಿರುವುವು. ಒಂದು ದೇಶದ ನೀತಿ ಅಥವಾ ಸದಾಚಾರ ಮತ್ತೊಂದು ದೇಶದವರಿಗೆ ಶುದ್ಧ ಅನಾಚಾರವಾಗಿ ತೋರಬಹುದು"** (ಕೃತಿಶ್ರೇಣಿ, ಸಂ.೧. ಪು.೩೭). ಎಲ್ಲೆಡೆ, ಎಲ್ಲರಿಗೂ ಒಂದೇ ನಿಯಮವನ್ನು ಜಾರಿಗೆ ತಂದು ಅದನ್ನೇ ಎಲ್ಲರೂ ಅನುಸರಿಸಬೇಕು ಎನ್ನಲಾಗದು. ವಯಸ್ಸಿಗನುಗುಣವಾಗಿಯೂ ನೀತಿಯ ಕಲ್ಪನೆಗಳು ಬದ ಲಾಗುತ್ತವೆ. ಆದರೆ ಇದರಲ್ಲಿ ಒಂದು ಪ್ರಮುಖ ಅಂಶವೆಂದರೆ ಹುಟ್ಟುಗುಣಗಳಂತೆ ಸಾಮಾನ್ಯವಾಗಿ ಅಭ್ಯಾಸಗಳು ತಂದೆ ಯಿಂದ ಮಗುವಿಗೆ ವರ್ಗಾವಣೆ ಆಗಲಾರವು. ಆದ್ದರಿಂದಲೇ ಒಂದೇ ಮನೆಯಲ್ಲಿ ವಿಭಿನ್ನ ಪ್ರಕೃತಿಯ, ಸ್ವಭಾವಗಳ ವ್ಯಕ್ತಿ ಗಳನ್ನು ಕಾಣುತ್ತೇವೆ. ಇದರ ಉಪಸಿದ್ಧಾಂತವಾಗಿ, ಅಭ್ಯಾಸ ಗಳನ್ನು ಬದಲಾಯಿಸಿಕೊಳ್ಳುವ ಸಾಮರ್ಥ್ಯವೂ ನಮ್ಮಲ್ಲಿಯೇ ಇದೆ ಎಂದು ಪ್ರಮಾಣಿತವಾಗುತ್ತದೆ. ವ್ಯಕ್ತಿಯ ಮನಸ್ಸಿನಲ್ಲಿ ಒಂದು ಅಭ್ಯಾಸವು ಉಪಯುಕ್ತ, ಅದಕ್ಕೆ ಸಮಾಜದ ಮನ್ನಣೆಯಿದೆ ಎಂಬ ದೃಢನಿಶ್ಚಯ ಮೂಡಿದರೆ ಅದನ್ನು ಜೀವನದುದ್ದಕ್ಕೂ ಪಾಲಿಸುವುದು ಕಂಡುಬರುತ್ತದೆ. ಸಮಾಜದ ನಿಯಮಕ್ಕೆ ವಿರುದ್ಧವಾದದ್ದು ಎಂದಾಗ ಭಯ, ಅಪರಾಧ ಪ್ರಜ್ಞೆಗಳೊಂದಿಗೆ ಕಳ್ಳತನದಿಂದ ತನ್ನ ಇಷ್ಟವನ್ನು ಸಾಧಿಸುವ ಪ್ರಯತ್ನ ಕಂಡು ಬರುತ್ತದೆ. ಇದು ವ್ಯಕ್ತಿಗೆ ತೃಪ್ತಿಯನ್ನು ನೀಡುವುದಿಲ್ಲ. ಆದರೆ ಅದರ ಪ್ರಭಾವದೊಳಗೆ ಎಷ್ಟರ ಮಟ್ಟಿಗೆ ಸಿಲುಕಿಹಾಕಿಕೊಂಡಿರುತ್ತಾನೆಂದರೆ ತನಗರಿವಿಲ್ಲದೆಯೇ ಅದನ್ನು ಮಾಡುತ್ತಿರುತ್ತಾನೆ. ಕಳ್ಳತನ, ಕೊಲೆ, ಅತ್ಯಾಚಾರ, ದರೋಡೆ ಗಳೆಲ್ಲ ಇಂತಹ ವ್ಯಕ್ತಿಗಳ ಜೀವನದ ಅವಿಭಾಜ್ಯ ಅಂಗಗಳಾಗಿ ಸಾಮಾನ್ಯ ಮಾನವನಂತೆ ಜೀವಿಸುವುದು ಅವರಿಗೆ ಅಸಾಧ್ಯ ವಾಗುತ್ತ ಬರುತ್ತದೆ. ಇಂತಹವರನ್ನು ಉನ್ಮತ್ತರೆಂದು ಪರಿಗಣಿಸಿ ಸಮಾಜ ಶಿಕ್ಷೆ ವಿಧಿಸುತ್ತದೆ. ಆದರೆ ಮೂಲದಲ್ಲಿ ಇವರು ಯಾವುದೋ ಪ್ರಬಲವಾದ ವಂಚನೆ, ನಿರುತ್ಸಾಹ, ಭಯ ಅಥವಾ ನಿರ್ಲಕ್ಷ್ಯಗಳಿಂದ ಇಂತಹ ಹಾನಿಕಾರಕ ಅಭ್ಯಾಸ ಗಳನ್ನು ರೂಢಿಸಿಕೊಳ್ಳುತ್ತಾರೆ ಎಂದು ಮನೋ ವಿಜ್ಞಾನಿಗಳು ಹೇಳುತ್ತಾರೆ.

ವ್ಯಕ್ತಿಯಂತೆ ಸಮಾಜಕ್ಕೂ ತನ್ನದೇ ಆದಂತಹ ರೂಢಿ ಗಳಿರುತ್ತವೆ. ಹೇಯ ಆಚರಣೆಗಳನ್ನು ಸಮರ್ಥಿಸಿಕೊಳ್ಳುತ್ತ ಇತರ ಜನಾಂಗಗಳ ಮೇಲೆ, ಮಾನವನ ಮೇಲೆ ಎಷ್ಟು ರೀತಿಯ ಅನೈತಿಕ ಆಚರಣೆಗಳನ್ನು ಅನೇಕ ಸಮಾಜಗಳು ರೂಢಿಸಿಕೊಂಡಿವೆ! ನರಬಲಿಯನ್ನು ಅನಾಗರಿಕವೆನ್ನುವ ನಾವು ಅಸ್ಪೃಶ್ಯತೆ, ಗುಲಾಮಗಿರಿ, ಬಾಲಕಾರ್ಮಿಕರ ಬಳಕೆ, ಬಡವರ ಶೋಷಣೆಯಂತಹ ಅಭ್ಯಾಸಗಳನ್ನು ಇನ್ನೂ ಸಾಧಿಸಿಕೊಳ್ಳು ತ್ತಲೇ ಬಂದಿದ್ದೇವೆ. ಅದಕ್ಕೆ ಸಾಂಸ್ಕೃತಿಕ, ಧಾರ್ಮಿಕ ಪಟ್ಟಿ ಗಳನ್ನೂ ಕಟ್ಟಿಬಿಡುತ್ತೇವೆ. ಹಿಟ್ಲರ್ ಎಸಗಿದ ಮಾರಣ ಹೋಮವನ್ನು ತಾನು ಧಾರ್ಮಿಕವೆಂದೇ ನಂಬಿದ್ದ. ತಾವೇ ಉತ್ತಮಕುಲ, ಜನಾಂಗವೆಂಬ ಧೋರಣೆ ಇತಿಹಾಸದುದ್ದಕ್ಕೂ ಅನೇಕ ಅನಾಹುತಗಳಿಗೆ ಕಾರಣವಾಗಿದೆ, ಆಗುತ್ತಿದೆ. ಇದು ಮಾನವನ ಪ್ರಗತಿಯಲ್ಲಿ ಕಂಡುಬರುವ ನೈತಿಕವೂ ಅಲ್ಲದ, ಸುಸಂಸ್ಕೃತವೂ ಅಲ್ಲದ ಮತಭ್ರಾಂತಿ, ಮೂಢನಂಬಿಕೆ. ಸಮಾಜವು ಇಂತಹ ಅಭ್ಯಾಸಗಳನ್ನು ಪೋಷಿಸುತ್ತಿರುತ್ತದೆ ಯಾದರೂ ಕೆಲವೇ ಕೆಲವು ಧೀರರ ಅಸಾಧಾರಣ ಜೀವನ, ನುಡಿಗಳಿಂದ ಇಂಥ ಕತ್ತಲ ನಡುವೆಯೂ ಹೊಂಗಿರಣ ಮೂಡಿ ಸಮಾಜವು ಸ್ವಲ್ಪಮಟ್ಟಿಗಾದರೂ ಬದಲಾಗಿರುವುದು ಕಂಡುಬರುತ್ತದೆ. ವ್ಯಕ್ತಿಯಂತೆ ಸಮಾಜಕ್ಕೂ ಒಂದು ಬದಲಾಗಬಲ್ಲ ಜೀವಂತ ಅಂಶವಿದೆ. ಅದನ್ನು ತಿದ್ದಬಹುದು. ಆದರೆ ನಿರಂತರ ಪ್ರಯತ್ನ ಹಾಗೂ ತ್ಯಾಗದಿಂದ ಮಾತ್ರ ಇದು ಸಾಧ್ಯವಾಗುತ್ತದೆ.

ಈ ಜಗತ್ತಿನಲ್ಲಿ ಇತರರ ಹೆದರಿಕೆಯಿಂದ ನಾವು ಕೆಲಸ ಮಾಡುತ್ತೇವೆ, ಇತರರ ಭಯದಿಂದ ಮಾತನಾಡುತ್ತೇವೆ, ಇತರರ ಅಂಜಿಕೆಯಿಂದ ಯೋಚಿಸುತ್ತೇವೆ. ಅಯ್ಯೋ! ನಾವು ಶತ್ರುಗಳ ಪ್ರಾಂತ್ಯದಲ್ಲಿ ಹುಟ್ಟಿದ್ದೇವೆ; ಪ್ರತಿಯೊಬ್ಬನೂ ಇತರರೆಲ್ಲರೂ ತನ್ನ ಮೇಲೆ ಕಣ್ಣಿಟ್ಟಿರುವ ಗೂಢಚಾರರೆಂಬ ಹೆದರಿಕೆಯಿಂದ ಕೂಡಿರುವನು. ಇದರಿಂದ ಪಾರಾಗಿರುವ ಧೀರರು ಯಾರೂ ಇಲ್ಲವೆ?

–ಸ್ವಾಮಿ ವಿವೇಕಾನಂದ


ನೀತಿನಿಯಮಗಳನ್ನು ಜಾರಿಗೆ ತರುವ ಮೂಲಕ ನೈತಿಕ ಮಟ್ಟವನ್ನು ಕಾಪಾಡಲು ಸಮಾಜ ಪ್ರಯತ್ನಿಸುತ್ತದೆ. ಸಮಾಜದ ನೀತಿನಿಯಮಗಳನ್ನು ರೂಪಿಸುವ ಹಿರಿಯರ ನಡವಳಿಕೆ ಇತರರ ಜೀವನವನ್ನು ರೂಪಿಸುತ್ತಿರುತ್ತದೆ. ಜನರು ಮುಖಂಡರನ್ನೇ, ಸಮಾಜದ ಪ್ರಮುಖರನ್ನೇ ಅನುಸರಿಸುವುದರಿಂದ ಅನೇಕ ವೇಳೆ ಅನೈತಿಕ ವರ್ತನೆಗೆ ಹಿರಿಯರೂ ಕಾರಣರಾಗಿರುತ್ತಾರೆ. ಆದ್ದರಿಂದಲೇ ಸ್ವಾಮಿ ವಿವೇಕಾನಂದರು ನಮ್ಮ ವೈಯಕ್ತಿಕ ಬದಲಾವಣೆಗೆ ಹೆಚ್ಚು ಪ್ರಾಶಸ್ತ್ಯ ನೀಡಿದ್ದು. "ಆಮೆಯು ತನ್ನ ಕಾಲುಗಳನ್ನೂ ತಲೆಯನ್ನೂ ತನ್ನ ಚಿಪ್ಪಿನ ಒಳಕ್ಕೆಳೆದುಕೊಂಡಾಗ ನಾವು ಅದನ್ನು ಚೂರುಚೂರು ಮಾಡಿ ಕೊಂದರೂ ಅದು ತಲೆಯನ್ನು ಹೇಗೆ ಹೊರಗೆ ಚಾಚುವುದಿಲ್ಲವೋ ಹಾಗೆ ತನ್ನ ಪ್ರೇರಕ ಕೇಂದ್ರಗಳ ಮೇಲೆಯೂ, ಕರ್ಮೇಂದ್ರಿಯಗಳ ಮೇಲೆಯೂ ಸಂಪೂರ್ಣ ಹಿಡಿತ ಹೊಂದಿರುವವನ ಶೀಲವೂ ಆಗುತ್ತದೆ. ಈ ಪ್ರಕಾರವಾಗಿ ಮನಸ್ಸಿನಲ್ಲಿ ಸದ್ಭಾವನೆಗಳು ಮತ್ತು ಸತ್ಸಂಸ್ಕಾರಗಳೇ ಸತತ ಕೆಲಸ ಮಾಡುತ್ತಿರುವ ಪರಿಣಾಮವಾಗಿ ಒಳ್ಳೆಯದನ್ನು ಮಾಡುವ ಪ್ರವೃತ್ತಿ ನಮ್ಮಲ್ಲಿ ಬಲಗೊಳ್ಳುತ್ತದೆ" (ಕೃತಿಶ್ರೇಣಿ, ಸಂ.೧ ಪು.೫೫). ಪ್ರತಿಯೊಬ್ಬ ವ್ಯಕ್ತಿಯೂ ಸುಧಾರಿಸಿದರೆ ಸಮಾಜ ಚೆನ್ನಾಗುವುದು ನಿಶ್ಚಿತ. ವ್ಯಕ್ತಿಯೇ ಸಮಾಜದ ಬೇರು. ನೀತಿ, ನಿಯಮಗಳು ಕೇವಲ ಗಿಡವನ್ನು ಹಿಡಿದಿಡುವ ಆಸರೆಗಳಷ್ಟೇ. ಗಿಡ ಸಬಲವಾಗಿದ್ದರೆ, ರೋಗರುಜಿನಗಳಿಂದ ಮುಕ್ತವಾಗಿದ್ದರೆ, ಆಸರೆಯ ಅಗತ್ಯವಿರುವುದೇ ಇಲ್ಲ. ನೀತಿ, ನಿಯಮಗಳನ್ನು ಮೀರಿ ನಿಲ್ಲುವ ಉತ್ತಮ ಸಂಸ್ಕಾರಗಳು ಎಲ್ಲರಲ್ಲೂ ಸ್ವಾಭಾವಿಕವಾಗಿ ಬಂದಾಗ, ನೈತಿಕತೆಯು ಸಹಜ ಅಂತಃಸ್ಫುರಣೆಯಿಂದ ಹೊರಹೊಮ್ಮಿದಾಗ, ಕೋರ್ಟು, ಕಚೇರಿ, ಪೋಲೀಸರೆಲ್ಲ ಕೆಲಸ ಕಳೆದುಕೊಳ್ಳುವ ಸಾಧ್ಯತೆಯನ್ನು ಆಶಿಸಬಹುದು.

✪



ಮನಸ್ಸು ಎಲ್ಲಿಯವರೆಗೂ ನಿಗ್ರಹವಾಗಿಲ್ಲವೋ ಅಲ್ಲಿಯವರೆಗೆ ಕೆಲವು ನಿಯಮಗಳನ್ನು ಅನುಸರಿಸಲೇಬೇಕು. ಇಲ್ಲದೇ ಇದ್ದರೆ ಎಂದಿಗೂ ನೀವು ಮನಸ್ಸನ್ನು ನಿಗ್ರಹಿಸಲಾರಿರಿ. ಕೆಲಸದಿಂದ ತಪ್ಪಿಸಿಕೊಳ್ಳುವುದು ಮನಸ್ಸಿನ ಸ್ವಭಾವ. ನೀವು ಒಂದು ನಿಯಮವನ್ನು ಮಾಡಿಕೊಂಡ ಮೇಲೆ ನಿಮ್ಮ ಮನಸ್ಸಿಗೆ 'ಈಗ ನೀನು ಈ ಕ್ರಮಕ್ಕೆ ಬದ್ಧವಾಗಿರಬೇಕು. ನಿನಗೆ ಇಚ್ಛೆ ಇರಲಿ, ಇಲ್ಲದೆ ಇರಲಿ ಇದರಂತೆ ನಡೆಯಬೇಕು', ಎಂದು ಹೇಳಬೇಕು. ನಿಮ್ಮ ಮನಸ್ಸನ್ನು ಹೀಗೆ ನಿಗ್ರಹಿಸಬೇಕು. ಇದರಲ್ಲಿ ನೀವು ಜಯಶೀಲರಾದರೆ ಮತ್ತಾವ ನಿಯಮವನ್ನೂ ಅನುಸರಿಸಬೇಕಾಗಿಲ್ಲ. ಅವು ತಮಗೆ ತಾವೇ ಬಿದ್ದುಹೋಗುವುವು.

– ಸ್ವಾಮಿ ಬ್ರಹ್ಮಾನಂದ



ಕರುಣೆಗೂ ವ್ಯಾಮೋಹಕ್ಕೂ ಸಾಗರದಷ್ಟು ಅಂತರವಿದೆ. ಸಾಧುವಿಗೆ ಕರುಣೆ ಬೇಕು. ಆದರೆ ವ್ಯಾಮೋಹ, 'ನಾನು' 'ನನ್ನದು' ಎಂಬ ಭಾವನೆ ಇರಕೂಡದು. ಏಕೆಂದರೆ ಅದೇ ಎಲ್ಲಾ ಬಂಧನಗಳ ಮೂಲ. ಶ್ರೀರಾಮಕೃಷ್ಣರಿಗೆ ವಿವೇಕಾನಂದರು ಮತ್ತು ಅವರಂತಿದ್ದ ಮತ್ತೆ ಕೆಲವರನ್ನು ಕಂಡರೆ ತುಂಬಾ ಪ್ರೇಮವಿತ್ತು. ಏಕೆಂದರೆ ಇತರರಿಗಿಂತ ಇಂಥವರಲ್ಲಿ ಭಗವಂತನ ಆವಿರ್ಭಾವ ಹೆಚ್ಚಾಗಿತ್ತು. ಅವರಿಗೆ ಅದು ಸಂಪೂರ್ಣವಾಗಿ ಗೊತ್ತಿತ್ತು. ಅದಕ್ಕೇ ಶ್ರೀರಾಮಕೃಷ್ಣರ ವಿಷಯದಲ್ಲಿ ಈ ಬಂಧನದ ಅಂಜಿಕೆಯೇ ಇರಲಿಲ್ಲ.

–ಸ್ವಾಮಿ ತುರೀಯಾನಂದ